SRI R. GUNDU RAO.—Chief Minister

(a) Yes.

(b) The sanction of a fire station in Mandya City is under active consideration of Government.

ಶ್ರೀ ಎಂ. ಎಸ್. ಆತ್ಮಾನಂದ.—ಮಂಡ್ಯ ನಗರಕ್ಕೆ ಅಗ್ನಿಶಾಮಕ ನಿಲ್ದಾಣ ಮಂಜೂರು ಮಾಡುವ ಬಗ್ಗೆ ಸರ್ಕಾರ ತೀವ್ರ ಪರಿಶೀಲನೆ ಮಾಡಿ ಈ ಬಗ್ಗೆ ಏನೇನು ಕ್ರಮಗಳನ್ನು ಕೈಗೊಂಡಿದೆ ಎಂದು ತಿಳಿಸುತ್ತೀರಾ ?

ಶ್ರೀ ಆರ್ ಗುಂಡೂರಾವ್.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಅಗ್ನಿಶಾಮಕ ನಿಲ್ದಾಣ ಮಾಡಲು ೪ ಎಕರೆ ಭೂಮಿ ಬೇಕೆಂದು ಜಿಲ್ಲಾಧಿಕಾರಿಗಳವರನ್ನು ಮತ್ತು ಸಂಬಂಧಪಟ್ಟವರನ್ನು ಕೇಳಿ ಕೊಂಡ ಮೇಲೆ ಒಂದು ಜಾಗ ತೋರಿದರು. ಆ ಜಾಗ ನಗರಕ್ಕೆ ದೂರವಿದೆ ಎಂದು, ನಗರದ ಪತ್ತಿರ ಭೂಮಿಯನ್ನು ಕೊಡಬೇಕೆಂದು ಜಿಲ್ಲಾಧಿಕಾರಿಗಳವರನ್ನು ಮತ್ತು ಮುನಿಸಿಪಾಲಿಟಿಯವರನ್ನು ಕೇಳಿದ ಮೇಲೆ ಅವರು ಊರಿನ ಮಧ್ಯೆ ೪ ಎಕರೆ ಕೊಡುವುದಕ್ಕೆ ಆಗುವುದಿಲ್ಲ ೩ ಎಕರೆ ೩೦ ಗುಂಟೆ ಭೂಮಿ ಯನ್ನು ಕೊಡುತ್ತೇವೆಂದು ಕಾಗದ ಬರೆದಿದ್ದಾರೆ. ಅದರ ಬಗ್ಗೆ ವ್ಯವಹಾರ ನಡೆಯುತ್ತಿದೆ. ಆದಷ್ಟು ಬೇಗ ಈ ಜಾಗವನ್ನು ಅಗ್ನಿಶಾಮಕ ಇಲಾಖೆಗೆ ತೆಗೆದುಕೊಂಡು ಅಗ್ನಿಶಾಮಕ ನಿಲ್ದಾಣ ಸ್ಥಾಪನೆ ಮಾಡುವು ದಕ್ಕೆ ಕಾರ್ಯಕ್ರಮ ಕೈಗೊಳ್ಳಲಾಗುತ್ತದೆ.

Officers working in the office of the Joint Director of Agriculture, Bangalore.

18 SRI A. RAMACHANDRA (Sullya)—Will the Chief Minister be pleased to state :—

(a) whether the officers in the office of the Joint Director of Agriculture are working in Bangalore itself since 5 to 6 years ;

(b) if so, the reasons for not transferring these officers ?

SRI R. GUNDU RAO (Chief Minister)—

(a) Officers belonging to A & B Groups : Officers' under this Group are not working in this office since 5 to 6 years.

Officers' under 'C' Group : Yes–one only.

(b) He has not been transferred in the interest of public service. However he will be transferred shortly.

ಶ್ರೀ ಎ. ರಾಮಚಂದ್ರ.—ನನ್ನ ಪ್ರಶ್ನೆಗೆ ಉತ್ತರ ಸಿಕ್ಕಿದೆ, ಉಪ ಪ್ರಶ್ನೆಗಳನ್ನು ಕೇಳುವುದಿಲ್ಲ.

Importing of Silk Yarn from Foreign Countries by the State Government

374 SRI C. ANDANAIAH (Kunigal)—Will the Chief Minister be pleased to state :—

(a) the reasons for importing silk yarn from foreign countries by the State Government ;

(b) whether it is not a fact that the silk growers of the state are put to hardship due to such import of silk yarn by the Government ?

SRI R. GUNDU RAO (Chief Minister)—

(a) The Government of Karnataka has not imported silk yarn from foreign countries.

(b) This question does not arise in view of the reply furnished to clause (a) above.

ಶ್ರೀ ಎಂ.ಸಿ. ಬಸಪ್ಪ.—ಮಾನ್ಯ ಸದಸ್ಯರಾದ ಸಿ. ಅಂದಾನಯ್ಯನವರ ಪರವಾಗಿ ನಾನು ಪ್ರಶ್ನೆಗಳನ್ನು ಕೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಅಂದಾನಯ್ಯನವರ ಪರವಾಗಿ ಪ್ರಶ್ನೆ ಕೇಳಲು ಅನುಮತಿ ಪಡೆದಿದ್ದೀರಾ ?

ಶ್ರೀ ಎಂ. ಸಿ. ಬಸಪ್ಪ.—ಮೊದಲು ಅನುಮತಿಯನ್ನು ಪಡೆದಿಲ್ಲ, ಈಗ ಅನುಮತಿಯನ್ನು ಕೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಪ್ರಶ್ನೆ ಕೇಳಬಹುದು.

ಶ್ರೀ ಎಂ.ಸಿ. ಬಸಪ್ಪ.—ಕರ್ನಾಟಕ ಸರ್ಕಾರವು ರೇಷ್ಮೆ ನೂಲನ್ನು ಹೊರದೇಶಗಳಿಂದ ಆಮದು ಮಾಡಿಕೊಂಡಿಲ್ಲವೆಂದು ಹೇಳುತ್ತೀರಿ. ಹೊರದೇಶಗಳಿಂದ ಕೇಂದ್ರ ರೇಷ್ಮೆ ಮಂಡಳಿ ಕಚ್ಚಾರೇಷ್ಮೆಯನ್ನು ಆಮದು ಮಾಡಿಕೊಳ್ಳುತ್ತಿರುವುದು ರಾಜ್ಯಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೈ. ರಾಮಕೃಷ್ಣ (ಮುಖ್ಯ ಮಂತ್ರಿಗಳ ಪರವಾಗಿ).—ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಎಂ.ಸಿ. ಬಸಪ್ಪ.—ನಮ್ಮ ರಾಜ್ಯಕ್ಕೆ ಎಷ್ಟು ಮಾರಾಟ ಮಾಡಿದ್ದಾರೆ ? ಇದರಿಂದ ರೇಷ್ಮೆ ಉತ್ಪಾದಕರಿಗೆ ತೊಂದರೆಯಾಗಿರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ವೈ. ರಾಮಕೃಷ್ಣ.—ಹೊರದೇಶಗಳಿಂದ ತರಿಸಿರತಕ್ಕ ರೇಷ್ಮೆ ನೂಲನ್ನು ನಮ್ಮ ರಾಜ್ಯಕ್ಕೆ ೨೫ ಟನ್ ಕೊಟ್ಟಿದ್ದಾರೆ. ನಾವು ಇನ್ನೂ ತೆಗೆದುಕೊಂಡಿಲ್ಲ. ಅದನ್ನು ತೆಗೆದುಕೊಂಡರೆ ಮಾನ್ಯ ಸದಸ್ಯರು ಹೇಳುವ ಪ್ರಕಾರ ಇಲ್ಲಿರತಕ್ಕ ರೇಷ್ಮೆ ಉತ್ಪಾದಕರಿಗೆ ಧಕ್ಕೆ ಉಂಟಾಗುತ್ತದೆ. ನಮ್ಮಲ್ಲಿಯೇ ೪೫೦, ೫೦೦ ರೂಪಾಯಿಗಳಿಗೆ ಸಿಗುವುದರಿಂದ ಬಹುಶಃ ನನಗನಿಸುತ್ತದೆ ಸರ್ಕಾರ ಈ ಒಂದು ವಿಷಯವನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿ ಕಾರ್ಯಕ್ರಮ ತೆಗೆಸುಕೊಳ್ಳುತ್ತದೆ.

ಶ್ರೀ ಎಂ. ಸಿ. ಬಸಪ್ಪ.—ರೇಷ್ಮೆಯನ್ನು ಹೊರದೇಶಗಳಿಂದ ಆಮದು ಮಾಡಿಕೊಂಡಿರುವುದು ಗೊತ್ತಾಗಿರುವುದರಿಂದ ನಮ್ಮಲ್ಲಿ ೩೫೦ ರೂಪಾಯಿಗಳಿಗೆ ಬಂದಿದೆ. ಆದುದರಿಂದ ಕೇಂದ್ರ ರೇಷ್ಮೆ ಮಂಡಳಿಯವರಿಗೆ ಹೊರದೇಶಗಳಿಂದ ರೇಷ್ಮೆಯನ್ನು ಆಮದು ಮಾಡಿಕೊಳ್ಳಬಾರದೆಂದು protest letter ಬರೆಯುವುದಕ್ಕೆ ಸಾಧ್ಯವಾಗುತ್ತದೆಯೆ ?

ಶ್ರೀ ವೈ. ರಾಮಕೃಷ್ಣ.—ಅವಶ್ಯಕತೆ ಇರುವುದರಿಂದ ಭಾರತ ಸರ್ಕಾರ ತರಿಸಿರುವುದು ಉಂಟು. ತರಿಸುವುದು ಬೇಡವೆಂದು ಹೇಳುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. I will examine it thoroughly.

SRI ABDUL LATEEF.—Sir, the silk industry is a very sensitive industry. When the very news that silk was being imported in our country came, the market went down. It is a fact that we produce 80% of total silk production. Whether it is a decision by the Central Government or State Government to import silk, the sufferers are our people. Therefore, in future atleast, will the Government consi-

der to make a strong representation to the Central Government against this policy of importing raw silk.

ಶ್ರೀ ವೈ. ರಾಮಕೃಷ್ಣ.—ನಾವು ಈ ವಾದವನ್ನು ಭಾರತ ಸರ್ಕಾರದ ಮುಂದೆ ಇಟ್ಟಿದ್ದೇವೆ. ಆ ಒಂದು ಸಂದರ್ಭ ಆ ರೀತಿ ಇತ್ತು. ೫೮೦ ರೂಪಾಯಿ ಆಗಿತ್ತು. ರೇಷ್ಮೆ ಉತ್ಪಾದನೆ ಕಡಿಮೆಯಾಗಿತ್ತು. ತಮಿಳುನಾಡು, ಉತ್ತರಪ್ರದೇಶಗಳಲ್ಲಿ ನೇಕಾರರಿಗೆ ಕೆಲಸವಿಲ್ಲದಿದ್ದಾಗ ರೇಷ್ಮೆಯನ್ನು ಹೊರದೇಶಗಳಿಂದ ತರಿಸಲಾಯಿತು. ಈಗ ರೇಷ್ಮೆ ದರ ಕಡಿಮೆಯಾದಾಗ ಸರ್ಕಾರ ಪುನರ್ ಪರಿಶೀಲನೆ ಮಾಡುವುದಕ್ಕೆ ಯೋಚನೆ ಮಾಡುತ್ತದೆ.

ಶ್ರೀ ಜಿ. ರಾಮೇಗೌಡ.—ತಾವು ನೇಕಾರರ ಅನುಕೂಲ ನೋಡಿದಿರಿ, ಆದ್ದರಿಂದ ರೇಷ್ಮೆಯನ್ನು ಹೊರದೇಶಗಳಿಂದ ಆಮದು ಮಾಡಿಕೊಂಡಿರಿ. ರೇಷ್ಮೆಯನ್ನು ಬೆಳೆಯತಕ್ಕ ಬಡ ರೈತರ ಕೂಗು ನಿಮಗೆ ಕೇಳಿಸಲಿಲ್ಲವೆ ?

ಶ್ರೀ ವೈ. ರಾಮಕೃಷ್ಣ.—ಬಡ ರೈತರ ಕೂಗು ಕೇಳಿಸಿದ ಮೇಲೆ, ರೇಟ್ ಕಡಿಮೆ ಮಾಡಿದ್ದೇವೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಸರ್ಕಾರದವರೂ ಪರಿಶೀಲನೆ ಮಾಡತಕ್ಕ, ಸಂದರ್ಭದಲ್ಲಿ ಮಾರುವವರ ಮತ್ತು ಕೊಂಡುಕೊಳ್ಳುವವರ ದೃಷ್ಟಿಯನ್ನಿಟ್ಟುಕೊಂಡು ಯೋಚನೆ ಮಾಡುತ್ತಾರೆಯೆ ?

ಶ್ರೀ ವೈ. ರಾಮಕೃಷ್ಣ.— ಪುನರ್ ಪರಿಶೀಲನೆ ಮಾಡುತ್ತೇವೆಂದು ಹೇಳಿದಾಗ, ಇವೆಲ್ಲಾ ಸೇರಿರುತ್ತವೆ.

ಶ್ರೀ ಎಂ.ಸಿ. ಬಸಪ್ಪ.—ರೇಷ್ಮೆ ಬೆಲೆ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆಮದು ರೇಷ್ಮೆಯನ್ನು ಮಾರಾಟ ಮಾಡಬಾರದೆಂದೂ ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು ?

ಶ್ರೀ ವೈ. ರಾಮಕೃಷ್ಣ.—ನಾವು ಇನ್ನೂ ಹೊರದೇಶದ ರೇಷ್ಮೆಯನ್ನು ತರಿಸಿಕೊಂಡಿಲ್ಲವಲ್ಲ ;

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ರೇಷ್ಮೆ ಬೆಲೆಯನ್ನು ೪೫೦ ರೂಪಾಯಿಗಳಿಗೆ ಫಿಕ್ಸ್ ಮಾಡಿದ್ದೇವೆಂದು ಹೇಳಿದರು. ಆದು ಸರಿಯೋ ತಪ್ಪೋ ಗೊತ್ತಿಲ್ಲ. ೪೫೦ ರೂಪಾಯಿಗಳಿಗೆ ಫಿಕ್ಸ್ ಮಾಡಿದಾಗ ನೀವು ಮಾರಾಟ ಮಾಡುವ ರೇಷ್ಮೆಯನ್ನು ಸಿಲ್ಕ್ ಫಿಲೇಚರ್ ಗಳವರು ಕೊಂಡುಕೊಳ್ಳುತ್ತಾರೆ. ಅವರು ಕೊಂಡುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ರೇಷ್ಮೆಯನ್ನು ಆಮದು ಮಾಡಿಕೊಂಡಾಗ ಬೋರ್ಡ್‌ನವರು ೧೦ ಪರ್ಸೆಂಟ್ ರೇಷ್ಮೆಯನ್ನು ಕೊಂಡುಕೊಳ್ಳುತ್ತಾರೆ.

ಶ್ರೀ ಡಿ. ದೇವರಾಜ ಅರಸ್.—ರೇಷ್ಮೆ ಬೆಲೆ ಏಕ್‌ದಂ ಆಗಿ ೬೦೦ ರೂಪಾಯಿಗಳಿಗೆ ಹೋಗಿದ್ದನ್ನು ಪುನಃ ೩೨೦, ೩೨೦ ರೂಪಾಯಿಗಳಿಗೆ ಇಳಿಸಿದ್ದೇವೆ ಅಂದರೆ, ರೇಷ್ಮೆ ಅಭಿವೃದ್ಧಿಗೆ ಅಪಘಾತವಾಗುತ್ತದೆ. ೬೦೦ ರೂಪಾಯಿ ಇದ್ದದ್ದು ಸರಿಯೆಂದು ನಾನು ಹೇಳುವುದಿಲ್ಲ. ಹೊರಗಡೆಯಿಂದ ರೇಷ್ಮೆಯನ್ನು ತಂದಿದ್ದರಿಂದ ಬೆಲೆ ಇಳಿದಿದೆ ಎಂದು ಹೇಳುವುದು ಸರಿಯಲ್ಲ. ಸರ್ಕಾರ ಕಾನೂನು ಪ್ರಕಾರ ಒಂದು ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್ ಮಾಡಿದ್ದಾರೆ. ಈ ಬೋರ್ಡ್‌ಗೆ ಹಣಕಾಸು ಕೊಟ್ಟು ೨೦ ಪರ್ಸೆಂಟ್ ರೇಷ್ಮೆಯನ್ನು ತೆಗೆದುಕೊಳ್ಳುತ್ತಾರೆ ಆಗ ಸ್ಟಬಿಲೈಸ್ ಆಗುತ್ತದೆ. ಬೋರ್ಡ್ ಮಾಡಿರುವುದು ಈ ಉದ್ದೇಶಕ್ಕೋಸ್ಕರ. ನಿಮಗೆ ನಿಲಿದಿರುವ ಪ್ರಕಾರ ಅಲ್ಲಿ ಕೆಲಸ ಮಾಡತಕ್ಕವರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿಲ್ಲವೆಂಬ ಕಾರಣವಿದೆ. ಆದರೆ ರೇಷ್ಮೆ ಮಾರ್ಕೆಟ್ ಬೋರ್ಡ್‌ಗೆ ಬರದ ಹಾಗೆ ಅವರ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದಾರೆಂದು ನಿಮಗೆ ಗೊತ್ತಾಗಿದೆ. Administratively what you should do, is you should overhaul the Marketing Society. ಇದನ್ನು ಒಂದು ಕಡೆ ಮಾಡಿ. ಇನ್ನೊಂದು ಕಡೆ ಇದನ್ನು ಮಾಡಿದ ಉದ್ದೇಶವೇನೆಂದರೆ, ವಿನಿಮಯಮೌಲ್ಯ ಪ್ರೈಸ್‌ಗಿಂತ ಕಡಿಮೆಗೆ ಏನಾದರು ಹೋದರೆ, ಅದನ್ನು ನೀವೇ ತೆಗೆದುಕೊಳ್ಳುವ ಏರ್ಪಾಡು ಮಾಡಿದರೆ ಆಗ ಒಂದು ಕಡೆ ರೈತರ ಹಿತದೃಷ್ಟಿಯನ್ನು ಕಾಪಾಡಿದಂತೆ ಆಗುತ್ತದೆ. ಮತ್ತೊಂದು ಕಡೆ ವೀವರ್ಸ್‌ನ ಹಿತದೃಷ್ಟಿಯನ್ನು ಕಾಪಾಡಿದಂತೆ ಆಗುತ್ತದೆ. ಈ ರೀತಿ ಬೆಲೆ ಹೆಚ್ಚು ಕಡಿಮೆಯಾಗುತ್ತಿರುವುದು ಇದೇ ಮೊದಲ ಸಲ ಅಲ್ಲ, ಅನೇಕ ಸಲ ಆಗಿದೆ. ಆದ್ದರಿಂದ ತಾವು ಇದರ ಕಡೆ ನಿಗಾ ಇಡಬೇಕು.

ಶ್ರೀ ವೈ. ರಾಮಕೃಷ್ಣ.—ಈಗ ರಾಷ್ಟ್ರೀಯ ಮಟ್ಟದಲ್ಲಿ ಒಂದು ಕಮಿಟಿ ರಚನೆ ಮಾಡಿದ್ದಾರೆ. ಅದರಲ್ಲಿ ನಮ್ಮ ಸರ್ಕಾರದ ಪ್ರತಿನಿಧಿ ಇದ್ದಾರೆ. ಅದರ ಕೆಲಸ ಏನೆಂದರೆ, ಫ್ಲೋರ್-ಲೆವಲ್ ಮತ್ತು

ಸೀಲಿಂಗ್ ಲೆವಲ್ ಮಧ್ಯೆ ಪೈಸ್‌ನ್ನು ಸ್ಟೆಬಿಲೈಜ್ ಮಾಡುವುದು. ಆ ಕಮಿಟಿಯು ವರದಿ ಬಂದ ಮೇಲೆ.....

ಶ್ರೀ ಡಿ. ದೇವರಾಜ ಅರಸ್.—ಅದನ್ನು ನಾವು ಸರ್ಕಾರದ ಗಮನಕ್ಕೆ ತರಲು ಕಾರಣವೇನೆಂದರೆ, ಇಂಡಿಯಾ ದೇಶದಲ್ಲಿ ಆಗುವಂತಹ ಬೆಳೆಯಲ್ಲಿ ಶೇಕಡಾ ೮೦ ಭಾಗ ನಮ್ಮ ರಾಜ್ಯದಲ್ಲಿಯೇ ಆಗುತ್ತಿದೆ. ಆದ್ದರಿಂದ ರಾಷ್ಟ್ರೀಯ ಮಟ್ಟದಲ್ಲಿ ಕಮಿಟಿ ರಚನೆ ಮಾಡಿದರೆ ಟೊಬ್ಯಾಕೋಗೆ ಆದ ಗತಿಯೇ ಇದಕ್ಕೂ ಆಗುತ್ತದೆ. ಆದ್ದರಿಂದ ರಾಜ್ಯಮಟ್ಟದಲ್ಲಿಯೇ ಇದರ ಬಗ್ಗೆ ಒಂದು ತೀರ್ಮಾನ ಕೈಕೊಳ್ಳುವುದು ಒಳ್ಳೆಯದೆಂದು.

ಶ್ರೀ ವೈ. ರಾಮಕೃಷ್ಣ.—ಈಗ ಕಮಿಟಿ ರಚನೆ ಆಗಿದೆ. ಆ ಕಮಿಟಿಯಲ್ಲಿ ನಮ್ಮ ಡೈರೆಕ್ಟರ್ ಇದ್ದಾರೆ. ಅವರು ಅನೇಕ ಸಲ ಸಭೆ ಸೇರಿದ್ದಾರೆ. ಈಗ ನಾವು ಆ ಕಮಿಟಿಯು ವರದಿಗಾಗಿ ಕಾಯುತ್ತಿದ್ದೇವೆ. ಆ ಕಮಿಟಿಯ ವರದಿ ಬಂದ ನಂತರ ನಾವು ಅದನ್ನು ಜಾರಿಗೆ ತರುತ್ತೇವೆ.

SRI M.C. BASAPPA.—Is the Government aware that the report of the Committee has already been sent to the State Government.

SRI Y. RAMAKRISHNA.—I am not aware.

SRI M.C. BASAPPA.—The Government has received the report. The Minister has not taken it seriously.

SRI Y. RAMAKRISHNA.—If that is so, I will attend to it.

SRI M. ABDUL LATHEEF.—In view of this, will the Government insist upon the Central Silk Board through the Central Government not to release imported silk and hold that stock as buffer stock to avoid further fluctuations ?

SRI Y. RAMAKRISHNA.—Since the Central Silk Board has already imported silk, we cannot do it now.

ಶ್ರೀ ಜಿ. ರಾಮೇಗೌಡ.—ಈಗ ಸಿಲ್ಕ್‌ಗೆ ೪೫೦ ರೂ.ಗಳ ಬೆಲೆಯನ್ನು ನಿಗದಿ ಮಾಡಿದ್ದೀರಿ. ಅದೇ ರೀತಿ ಕಕೂನ್‌ಗೆ ಏನು ಬೆಲೆಯನ್ನು ನಿಗದಿ ಮಾಡಿದ್ದೀರಿ.

SRI Y. RAMAKRISHNA.—That has already been fixed by the Central Silk Board. ಅವರು ನಿಗದಿ ಮಾಡಿರುವ ದರವನ್ನು ನಾವು ಕೊಡುತ್ತಿದ್ದೇವೆ.

IMPROVEMENT OF MYSORE CHEMICAL FERTILIZERS FACTORY

623. SRI D. T. MAYANNA.— (Huliyurdurga).— Will the Minister for Co-operation be pleased to state.—

(a) the year in which the Mysore Chemical Fertilizers Factory in Belagola, Mandya District was established ;

(b) the quantum of fertilizer Manfactured daily in this factory ;

(c) the problems faced by Government for improvement of this factory ?

SRI. H. C. SRIKANTAIAH.— (Minister for Co-operation).—

(a) Gamman Farkam Fertilizer factory is at Belagola of Mandya District. It is working for the last four years.